(SRI G. VENKATAI GOWDA)

Madras Societies Act have not received this concession?

Sri MALI MARIAPPA.—I do not know. I will have to verify it.

ಶ್ರೀ ಎಚ್. ಜಿ. ನರಸಿಂಹೇಗೌಡ.—ರಿಕಾರ್ಡುಗಳ ಹಿಡಿತ ಬಹಳ ಜಾಸ್ತಿಯಾಗಿರುವುದರಿಂದ ಜನಗಳು ಮಧ್ಯಮಾವಧಿ ಸಾಲವನ್ನು ತೆಗೆದುಕೊಳ್ಳುವುದಕ್ಕೆ ಮುಂದೆ ಬರುವುದು ಕಡಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಮಾಲಿ ಮರಿಯಪ್ಪ.—ಅದು ಅಷ್ಟು ಸರಿಯಿಲ್ಲ. ಮಧ್ಯಮಾವಧಿ ಸಾಲಕ್ಕೆ ಸಾಕಷ್ಟು ಮತ್ತು ಹೆಚ್ಚಿನ ಪ್ರಮಾಣದಲ್ಲಿ ಅರ್ಜಿಗಳು ಬರುತ್ತಿವೆ. ಅವುಗಳನ್ನು ಆದಷ್ಟು ಜಾಗ್ರತೆ ವಿಲೇವಾರಿಯಾಗಿ ಹಣ ಸಂದಾಯವಾಗುತ್ತಿದೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಬೆಂಗಳೂರು ಜಿಲ್ಲೆಗೆ ಆಡಿಷನಲ್ ಅಲಾಟ್‌ಮೆಂಟ್ ಕೊಡಲಿಕ್ಕೆ ಇದ್ದ ವಿಶೇಷ ಕಾರಣಗಳೇನು?

ಶ್ರೀ ಮಾಲಿ ಮರಿಯಪ್ಪ.—ಬೆಂಗಳೂರಿನ ಸುತ್ತ ಮುತ್ತ ಸ್ವಲ್ಪ ಜಮೀನು ಬಹಳ ಅಭಿವೃದ್ಧಿಯಾಗುತ್ತಿದೆ. ಹಣ್ಣು ಹಂಪಲುಗಳನ್ನು ವಿಶೇಷವಾಗಿ ಬೆಳೆಯುತ್ತಿದ್ದಾರೆ. ನಣ್ಣ ನಣ್ಣ ಬಾವಿಗಳನ್ನು ತೆಗೆಯುತ್ತಿದ್ದಾರೆ. ತಾಲ್ಲೂಕು ಪ್ರದೇಶಗಳಲ್ಲಿ ಸಹ ವ್ಯವಸಾಯಾಭಿವೃದ್ಧಿ ಇತ್ಯಾದಿ ಕೆಲಸಗಳು ಹೆಚ್ಚಾಗಿ ನಡೆಯುತ್ತಿವೆ. ಅದಕ್ಕೋಸ್ಕರವಾಗಿ ಅಲಾಟ್ ಮಾಡಿದ್ದೇವೆ.

ಶ್ರೀ ಇ. ನಾರಾಯಣಗೌಡ.—ಅಲ್ಪಕಾಲಾವಧಿ ಸಾಲವನ್ನು ಫೆಬ್ರುವರಿ ತಿಂಗಳಿನಲ್ಲಿ ವಾಪಸು ಕೊಡಬೇಕೆಂದು ಮಾಡಿರುವುದರಿಂದ ಎಷ್ಟೋ ಜನರಿಗೆ ಸುಗ್ಗಿ ಆಗದೆ ಹಣ ಬಂದಿರುವುದಿಲ್ಲವಾಗಿ ಬಹಳ ಅನಾನುಕೂಲವಾಗುತ್ತದೆ. ಆದ್ದರಿಂದ ಈ ಸಾಲವನ್ನು ಜೂನ್‌ತಿಂಗಳವರೆಗೆ ವಸೂಲು ಮಾಡುವುದನ್ನು ಮುಂದುವರಿಸುವುದಕ್ಕೆ ಸಾಧ್ಯವೇ?

ಶ್ರೀ ಮಾಲಿ ಮರಿಯಪ್ಪ.—ಹಾಗೆ ಮಾಡಲು ಆಗುವುದಿಲ್ಲ. ಒಂದೊಂದು ಸ್ಥಳದಲ್ಲಿ ಒಂದೊಂದು ಬೆಳೆ ಒಂದೊಂದು ಕಾಲದಲ್ಲಿ ಬರುತ್ತದೆ. ಅಂಥ ಕಡೆಗಳಲ್ಲಿ ರೂಲ್ಸನ್ನು ಸ್ವಲ್ಪ ಸಡಿಲಗೊಳಿಸಿ, ಸ್ಥಳದ ವಿದ್ಯಮಾನಕ್ಕನುಗುಣವಾಗಿರುವಂತೆ ಮಾಡಬೇಕೆಂದು ಆಲೋಚನೆ ಮಾಡಲಾಗಿದೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಕೋಲಾರ ಜಿಲ್ಲೆಗೆ ಕೊಟ್ಟಿದ್ದ ಅಲಾಟ್‌ಮೆಂಟ್ ಮುಗಿದು ಸುಮಾರು ಎರಡು ಲಕ್ಷ ರೂಪಾಯಿನ ದರಖಾನ್ತುಗಳು ಉಳಿದಿರುವುದು ಸರ್ಕಾರಕ್ಕೆ ಗೊತ್ತಿದೆಯೇ?

ಶ್ರೀ ಮಾಲಿ ಮರಿಯಪ್ಪ.—ಕೋಲಾರ ಜಿಲ್ಲೆಗೆ ಸಹ ವಿಶೇಷ ಕಾರಣಕ್ಕೋಸ್ಕರ ಹೆಚ್ಚುವರಿ ಮೊತ್ತವನ್ನು ಅಲ್ಲಿಯ borrowing capacityಗಿಂತ ಹೆಚ್ಚು ಕೊಟ್ಟಿದೆ.

ಶ್ರೀ ಕೆ. ಎಲ್. ನರಸಿಂಹಯ್ಯ.—ಈ ಸಾಲ ಕೊಡುವ ರಿಯಾಯಿತಿಗಳನ್ನು ಒಂದೊಂದು ವರ್ಷಕ್ಕೆ ಮುಂದುವರಿಸುವುದರಿಂದ ರೈತನಿಗೆ ತೊಂದರೆಯಾಗುತ್ತಿದೆ. ಮದರಾಸ್ ರಾಜ್ಯದಲ್ಲಿರುವಂತೆ 10 ವರ್ಷ ಒಟ್ಟಿಗೆ ಮಾಡುತಿರಾ?

ಶ್ರೀ ಮಾಲಿ ಮರಿಯಪ್ಪ.—ಪರಿಶೀಲನೆ ಮಾಡೋಣ.

ಶ್ರೀ ಎಸ್. ಆರ್. ರಾಮಯ್ಯ.—ಬಡ್ಡಿಯ ದರವನ್ನು ಈಗ 6¼ ರಿಂದ 7¼ಗೆ ಏರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಮಾಲಿ ಮರಿಯಪ್ಪ.—ಆ ವಿಷಯ ಇದರಲ್ಲಿ ಉದ್ಭವಿಸಾಗುವುದಿಲ್ಲ.

Applications pending for Grant of Permits in the Regional Transport Office, Shimoga.

*Q.—479. Sri Kundur RUDRAPPA (Channagiri).—

Will the Government be pleased to state :—

(*a*) the number of applications pending before the Regional Transport Authority, Shimoga, praying for grant of temporary and pucca permits ;

(*b*) since how long they are pending?

A.—Sri B.D. JATTI (Chief Minister).—

		No of applications pending
(*a*)	For grant of pucca permits.	280
	For grant of temporary permits	52
(*b*)	*Pucca permits.*	
1955	... ...	1
1956	... ...	11
1957	... ...	153
1958	... ...	115
	Temporary permits.	
1958	... ...	5
1959	... ...	47
	(For 3 months)	

ಶ್ರೀ ಕುಂದೂರು ರುದ್ರಪ್ಪ.—ಈ 280 ಅರ್ಜಿಗಳೂ 1955 ರಿಂದ 1958ವರೆಗೆ ವಿಲೇ ಆಗದೆ ಉಳಿದಿವೆ. ಇದಕ್ಕೆ ಕಾರಣವೇನು?

†ಶ್ರೀ ಬಿ. ಬಸವಲಿಂಗಪ್ಪ.—1957ನೆಯ ಏಪ್ರಿಲ್ ತಿಂಗಳಿನಲ್ಲಿ ಶಿವಮೊಗ್ಗ ಜಿಲ್ಲೆಯನ್ನು ಮೈಸೂರು ಡಿವಿಜನ್ನಿಗೆ ಸೇರಿಸಿದವು. ಆನಂತರ 1ನೆಯ ಜನವರಿ 1958ರಲ್ಲಿ reorganisation ಆಯಿತು. ಆ ಪ್ರಕಾರ ಪ್ರತಿಯೊಂದು ಡಿಸ್ಟ್ರಿಕ್ಟಿನಲ್ಲಿಯೂ ಒಂದೊಂದು ರೀಜನಲ್ ಟ್ರಾನ್ಸ್‌ಪೋರ್ಟ್ ಆಫೀಸನ್ನು ಮಾಡಿದೆ. ಈ ಕೇಸುಗಳೆಲ್ಲ ಇಲ್ಲಿಂದ ಅಲ್ಲಿಗೆ, ಅಲ್ಲಿಂದ ಇಲ್ಲಿಗೆ ಹೋಗಿ ಬರುವುದರಲ್ಲಿ ತಡವಾಗಿದೆ. Inter-regionಗೆ ಸಂಬಂಧಿಸಿದ ಏನಾದರೂ ಒಂದು ಮಾರ್ಗವನ್ನು ತೆರೆಯತಕ್ಕ ಸಂದರ್ಭ ಬಂದಾಗ ಎರಡು ಪ್ರದೇಶಗಳ ಅಭಿಪ್ರಾಯವನ್ನೂ ಪಡೆಯಬೇಕಾಗುತ್ತದೆ. ಮತ್ತು S.T.A. ಅಭಿಪ್ರಾಯ ಪಡೆಯಬೇಕಾಗುತ್ತದೆ. ಅನಂತರ ಪರ್ಮಿಟ್‌ಗಳನ್ನು ಕೊಡುವುದರಲ್ಲಿ ಆಯಾ ಪ್ರದೇಶಕ್ಕೆ ಬಿಡಬೇಕು. ಇಂಥ ಪರಿಸ್ಥಿತಿ ಇರುವುದರಿಂದ, R.T.A. ಮತ್ತು S.T.A. ಒಂದು semi judicial body ಆಗಿರುವುದರಿಂದ ಈ ರೀತಿ ತಡವಾಗುತ್ತಿದೆ. ಉದ್ದೇಶ ಪೂರ್ವಕವಾಗಿ ತಡ

ವಾಗಿಲ್ಲ. ಪ್ರೊಸೀಜರ್ ಏನಿದೆಯೋ ಅದನ್ನು ಅನುಸರಿಸುವುದರಲ್ಲಿ ತಡವಾಗಿದೆ ಎಂದು ಮಾನ್ಯ ಸದಸ್ಯರಿಗೆ ಹೇಳಬಲ್ಲೆ.

ಶ್ರೀ ಕುಂದೂರು ರುದ್ರಪ್ಪ.—1955 ರಿಂದ ಅರ್ಜಿಗಳು ತೀರ್ಮಾನವಾಗದೆ ಉಳಿದಿವೆ. ಆದರೆ ಇತ್ತೀಚೆಗೆ ಎಂದರೆ ಎರಡು ವರ್ಷಗಳಿಂದ ಅರ್ಜಿಹಾಕಿದವರಿಗೆ ಪರ್ಮಿಟ್ ಕೊಟ್ಟಿದ್ದಾರೆ. ಇಂಥದ್ದರ ಮೇಲೆ ಏನು ಕ್ರಮ ತೆಗೆದುಕೊಂಡಿದೀರಿ ?

ಶ್ರೀ ಬಿ. ಬಸವಲಿಂಗಪ್ಪ.—ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಕುಂದೂರು ರುದ್ರಪ್ಪ.—ಹಿಂದೆ ಉಳಿದಿರುವ ಅರ್ಜಿಗಳು ಜಾಗ್ರತೆಯಾಗಿ ಫೈನಲ್ ಆಗಬೇಕು ಮತ್ತು ಹೊಸ ಅರ್ಜಿಗಳಿಗೆ ಗಮನ ಕೊಡ ಕೂಡದು ಎಂದು ಯಾದಿಕೊಡುತ್ತೀರಾ?

ಶ್ರೀ ಬಿ. ಬಸವಲಿಂಗಪ್ಪ.—ಸೂಚನೆ ಕೊಡುತ್ತೇವೆ.

ಶ್ರೀ ಕುಂದೂರು ರುದ್ರಪ್ಪ.—ಶಿವಮೊಗ್ಗ ಜಿಲ್ಲೆಯಲ್ಲಿ ಅಲ್ಲರುವ R.T.O. ಮೂರು ವರ್ಷಗಳ ಕಾಲ ಪರ್ಮಿಟ್ ರಿನ್ಯೂ ಮಾಡುತ್ತಾರೆ. ಆದರೆ ಚಿತ್ರದುರ್ಗದಲ್ಲಿ ಮೂರು ತಿಂಗಳು ಮಾತ್ರ ಮಾಡಲು ಕಾರಣವೇನು?

ಶ್ರೀ ಬಿ. ಬಸವಲಿಂಗಪ್ಪ.—ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಕುಂದೂರು ರುದ್ರಪ್ಪ.—ಶಿವಮೊಗ್ಗ R.T.O. ಆಫೀಸಿಗೆ ಸಂಬಧಪಟ್ಟಂತೆ ಲಂಚ ನಿರೋಧ ಶಾಖೆಯವರಿಂದ ಎಷ್ಟು ಕೇಸುಗಳು ದಾಖಲಾಗಿವೆ?

ಶ್ರೀ ಬಿ. ಬಸವಲಿಂಗಪ್ಪ.—ಆ ಪ್ರಶ್ನೆ ಉದ್ಭವಿಸುವುದಿಲ್ಲ.

Sri C. J. MUCKANNAPPA.—Out of the 115 pucca permits pending in 1958 how many persons have applied for these permits, in how many routes?

Sri B. BASAVALINGAPPA.—According to the rules, persons have applied.

ಶ್ರೀ ಕುಂದೂರು ರುದ್ರಪ್ಪ.—R.T.O. ಒಂದು ತೀರ್ಮಾನ ಮಾಡುತ್ತಾರೆ. ಅದರ ನಕಲು ಬೇಕೆಂದು ಕೇಳಿದರೆ, ಅದಕ್ಕಾಗಿ ಕೊಡುವ ದುಡ್ಡನ್ನು ಗುಮಾಸ್ತರು ತೆಗೆದುಕೊಳ್ಳುತ್ತಾರೆ. ಮುದರಾಸಿನಲ್ಲಿ ಸರ್ಕಾರಕ್ಕೆ ಕೊಡುತ್ತಾರೆ. ನಮ್ಮಲ್ಲಿ ಗುಮಾಸ್ತರು ಈ ಹಣವನ್ನು ತೆಗೆದುಕೊಳ್ಳುವುದಕ್ಕೆ ಕಾರಣವೇನು?

ಶ್ರೀ ಬಿ. ಬಸವಲಿಂಗಪ್ಪ.—ಈ ವಿಷಯ ಸರ್ಕಾರದ ಗಮನಕ್ಕೆ ಬಂದಿಲ್ಲ. ಕಾಪಿ ತೆಗೆದುಕೊಳ್ಳುವ ವಿಚಾರದಲ್ಲಿ ಸರಿಯಾದ ಪ್ರೊಸೀಜರ್ ಇದೆ. ಅದರ ಪ್ರಕಾರ ತೆಗೆದುಕೊಳ್ಳಬೇಕೆಂದು ಮಾನ್ಯ ಸದಸ್ಯರೆಲ್ಲರಿಗೂ ಗೊತ್ತು.

ಶ್ರೀ ಕುಂದೂರು ರುದ್ರಪ್ಪ.—ಗುಮಾಸ್ತರಿಗೆ ಸಂಬಳ ಕೊಡುತ್ತಿದ್ದೀರಿ. ಅದರ ಜೊತೆಗೆ ಫೀ ಸಹ ಕೊಡುವುದಕ್ಕೆ ಕಾರಣವೇನು?

ಶ್ರೀ ಬಿ. ಬಸವಲಿಂಗಪ್ಪ.—ಕೋರ್ಟ್ ವ್ಯವಹಾರದಲ್ಲಿ ಕಾಪಿ ತೆಗೆದುಕೊಳ್ಳಲು ಎರಡೂವರೆ ಆಣೆಯಾಗಾಗದಗಳಿಯತ್ತವೆ. ಅದರಲ್ಲಿ ಕಾಪಿ ಮಾಡತಕ್ಕವನಿಗೆ ಇಷ್ಟು ಕೊಡಬೇಕು ಎಂದು ನಿಗದಿಯಾಗಿದೆ, ಅಷ್ಟು ಹಣವನ್ನು ಅವರಿಗೆ ಕೊಡತಕ್ಕದ್ದು ಕಾನೂನುಬದ್ಧವಾಗಿರುವುದರಿಂದ ಅದನ್ನು ತೆಗೆದುಕೊಳ್ಳುವುದರಲ್ಲಿ ತಪ್ಪಿಲ್ಲ.

ಶ್ರೀ ಕುಂದೂರು ರುದ್ರಪ್ಪ.—ಸಂಬಳ ತೆಗೆದುಕೊಂಡರೂ ಕೂಡ ಕಾಪಿಕೊಡಲು ಒಬ್ಬ ಅರ್ಜಿದಾರರಿಂದ ಹಣ ತೆಗೆದುಕೊಂಡರೆ ಅದು ಲಂಚ ಆಗುವುದಿಲ್ಲ. ಮುದರಾಸಿನಲ್ಲಿ ಈ ಹಣ ಸರ್ಕಾರಕ್ಕೆ ಬರುತ್ತದೆ. ಸಂಬಳಕೊಟ್ಟರೂ ಕಾಪಿ ಫೀ ತೆಗೆದುಕೊಳ್ಳುವುದು ಹೇರಳವಾಗಿದೆ. ಈ ವಿಷಯವನ್ನು ಪರಿಶೀಲನೆ ಮಾಡುತ್ತೀರಾ?

ಶ್ರೀ ಬಿ. ಬಸವಲಿಂಗಪ್ಪ.—ಕಾಪಿ ಬರೆದುಕೊಡಲು extra duty ಆಗುತ್ತದೆಂದು ಸರ್ಕಾರದ ಗಣನೆಯಲ್ಲಿದೆ. ಅದಕ್ಕೋಸ್ಕರ ಕಾನೂನು ಪ್ರಕಾರ ಎಷ್ಟು ಮಾತ್ರ ಕೊಡಬಹುದೋ ಅಷ್ಟನ್ನು ಮಾತ್ರ ಕೊಡುತ್ತೇವೆ.

Sri C. J. MUCKANNAPPA.—May I know for what purposes these 47 applications were made in 1959 for temporary permits?

Sri B. BASAVALINGAPPA.—The detailed information is not available.

Sri C. K. RAJAIAH SETTY.—It was replied that copying was considered as extra duty. If one does this work during office hours, do you consider it as extra duty?

Sri B. BASAVALINGAPPA.—Under the rules it is so even in courts.

ಶ್ರೀ ಜಿ. ಎನ್. ಬೊವ್ಮೇಗೌಡ.—R.T.O. ಗೆಜೆಟೆಡ್ ಅಧಿಕಾರಿಗಳಾಗದೆ ಇರುವುದರಿಂದ ಹೆಚ್ಚಿನ ಅವ್ಯವಸ್ಥೆಗೆ ಕಾರಣವಾಗಿದೆಯಲ್ಲವೆ?

ಶ್ರೀ ಬಿ. ಬಸವಲಿಂಗಪ್ಪ.—ಇದನ್ನೆಲ್ಲವನ್ನು ಪರಿಶೀಲನೆ ಮಾಡಿ ಸೂಕ್ತವಾದ ವ್ಯವಸ್ಥೆಮಾಡಬೇಕೆಂದು ಸರ್ಕಾರ ತೀರ್ಮಾನ ತೆಗೆದುಕೊಂಡಿದೆ.

Sri U. S. NAYAK.—May I know whether only 8-10 subjects are disposed of in every monthly meeting of the R.T.O.?

Sri B. BASAVALINGAPPA.—It depends upon the type and kind of subjects that would be taken up for consideration by the R.T.O.

ಶ್ರೀ ಡಿ. ಟಿ. ಸೀತಾರಾಮರಾವ್.—ಹಂಗಾಮಿ ಪರ್ಮಿಟ್ ಎಂದರೆ ಅದಕ್ಕೆ ಎಷ್ಟು ದಿವಸ ವಾಯಿದೆ ಇದೆ?

ಶ್ರೀ ಬಿ. ಬಸವಲಿಂಗಪ್ಪ.—ಐಳು ದಿವಸಗಳಕಾಲಕ್ಕೆ R.T.O.ಗೆ ಅಧಿಕಾರ ಕೊಡಲಾಗಿದೆ. ಅದರ ಮೇಲ್ಪಟ್ಟು ಕೊಡಬೇಕಾದರೆ ಅವರಿಗೆ ಅಧಿಕಾರವಿಲ್ಲ.

ಶ್ರೀ ಕುಂದೂರು ರುದ್ರಪ್ಪ.—280 ಕೇಸುಗಳು ತೀರ್ಮಾನವಾಗದೆ ಉಳಿದಿವೆ. ಪ್ರತಿ ತಿಂಗಳೂ ಪಾರ್ಟಿಗಳಿಗೆ ನೋಟೀಸ್ ಕೊಟ್ಟು, ಅವರನ್ನು ಕರೆಸಿ ಅವರ ಅರ್ಜಿಗಳನ್ನು ಇತ್ಯರ್ಥಮಾಡಬೇಕು. ಅವರ ಕೇಸುಗಳನ್ನು ತೆಗೆದುಕೊಳ್ಳದೆ ಹೋದರೆ ರೈತರಿಗೆ ಮತ್ತು ಇತರರಿಗೆ ಬಹಳ ತೊಂದರೆಯಾಗುತ್ತದೆ. ಏತಕ್ಕೋಸ್ಕರ ಹೀಗೆ ಮಾಡುತ್ತಿದ್ದಾರೆ?

ಶ್ರೀ ಬಿ. ಬಸವಲಿಂಗಪ್ಪ.—ಈ 280 ಕೇಸುಗಳಲ್ಲಿ 45 ತೀರ್ಮಾನವಾಗಿವೆ. ಉಳಿದುವುಗಳನ್ನು, ಅತಿ ಜಾಗ್ರತೆ ತೀರ್ಮಾನಮಾಡುವುದಕ್ಕೆ ಸೂಕ್ತ ಸಲಹೆಯನ್ನು ಕೊಡಲಾಗುತ್ತದೆ.

ಶ್ರೀ ಕುಂದೂರು ರುದ್ರಪ್ಪ.—ಕೇಸುಗಳನ್ನು ತೆಗೆದುಕೊಳ್ಳುತ್ತೇವೆಂದು ನೋಟೀಸ್ ಕೊಟ್ಟರೂ, ಅದರಲ್ಲಿ ಎರಡು-ಮೂರನ್ನು ಮಾತ್ರ ಫೈನಲ್ ಮಾಡಿ ಉಳಿದುವನ್ನು ಹಾಗೆಯೇ ಬಿಡುತ್ತಾರೆ. ರೈತರ ದೃಷ್ಟಿಯಿಂದ ಕೇಸುಗಳನ್ನು ಯಾವಾಗ ತೆಗೆದುಕೊಳ್ಳುತ್ತಾರೆ ಎಂದು ಸಂಬಂಧಪಟ್ಟವರಿಗೆ ನೋಟೀಸ್ ಕೊಡುವ ವ್ಯವಸ್ಥೆಮಾಡುತ್ತೀರಾ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರ ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಂಡು ಸೂಕ್ತ ಸಲಹೆಯನ್ನು ಕೊಡುತ್ತೇವೆ.

ಶ್ರೀ ಡಿ. ಟಿ. ಸೀತಾರಾಮರಾವ್.—ಉಳಿದಿರುವ ಕೇಸುಗಳನ್ನು ಬೇಗ ಇತ್ಯರ್ಥಪಡಿಸಲು ಪ್ರತಿತಿಂಗಳೂ ಇಷ್ಟು ರಿಕಾರ್ಡುಗಳನ್ನು ಇತ್ಯರ್ಥಮಾಡಬೇಕೆಂದು ಸೂಚನೆ ಕೊಡುತ್ತೀರಾ?

ಶ್ರೀ ಬಿ. ಬಸವಲಿಂಗಪ್ಪ.—ಅದನ್ನು ನಾವು ಗಮನದಲ್ಲಿಟ್ಟುಕೊಂಡು ಸೂಕ್ತ ಸಲಹೆಯನ್ನು ಕೊಡಬೇಕಾಗಿದೆ. ಅದನ್ನು ಮಾಡುತ್ತೇವೆ.

ಶ್ರೀ ಕೆ. ಎರ್. ನರಸಿಂಹಯ್ಯ.—ರೀಜನಲ್ ಟ್ರಾನ್ಸ್‌ಪೋರ್ಟ್ ಪ್ರೊಸಿಡೆಂಟರವರಿಗೂ ಮತ್ತು ಸೆಕ್ರೆಟರಿಗಳಿಗೂ ಅಧಿಕಾರವಿಲ್ಲದೇ ಇರುವುದರಿಂದ ಕೆಲವು ಸಂದರ್ಭಗಳಲ್ಲಿ ತೊಂದರೆಯಾಗಿರುವುದು ಗೊತ್ತಿದೆಯೇ?

9 A.M.

ಶ್ರೀ ಬಿ. ಬಸವಲಿಂಗಪ್ಪ.—ಇದು ಕ್ವಾಸೀ ಜುಡಿಷಿಯಲ್ಲು ಬಾಡಿ ಎಂದು ಈ ಮೊದಲೇ ಹೇಳಿದ್ದೇನೆ. ಇದು ಅವರಿಗೆ ಸಂಬಂಧಪಟ್ಟದ್ದು.

Manufacture of Kannada Typewriters.

*Q.—502. Sri S. SUBBAYA NAIK (Puttur).—

Will the Government be pleased to state:—

(*a*) the steps taken by them to manufacture and introduce Kannada Typewriters;

(*b*) whether the Key Board has been approved;

(*c*) the steps taken by them to implement the agreements entered into between the Government and Sri Subba Rao to the effect that when he submits the Kannada Typewriter designed and manufactured by him, they would purchase the same by paying adequate amount?

*A.—Sri ANNA RAO GANAMUKHI (Minister for Education).—

(*a*) Government have accepted the Kannada Typewriter Key Board as designed by Sri K. Ananthasubbaraya, Journalist, Hassan, and orders have already been placed with Messrs. Rayala Corporation (Madras) Private Ltd., Madras, for manufacture of six Kannada Typewriters for trial purposes according to that Key Board.

(*b*) Yes.

(*c*) No agreement has been entered into by Government with Sri Subba Rao in this matter.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಶ್ರೀ ಅನಂತ ಸುಬ್ಬರಾಯರು ತಯಾರಿಸಿದ ಕನ್ನಡ ಟೈಪರೈಟರಿಗಾಗಿ ಆರ್ಡರನ್ನು ಯಾವ ತಾರೀಖಿನಲ್ಲಿ ಕೊಡಲಾಯಿತು?

†ಶ್ರೀ ಅಣ್ಣಾರಾವ್ ಗಣಮುಖಿ.—4ನೆಯ ಫೆಬ್ರವರಿ 1959ರಲ್ಲಿ ಕೊಡಲಾಗಿದೆ.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಇದು ನಿಜರವಾಗಿ ಇಲ್ಲಿ ಯಾವಾಗ ಪ್ರಯೋಗಕ್ಕೆ ಬರಬಹುದು?

ಶ್ರೀ ಅಣ್ಣಾರಾವ್ ಗಣಮುಖಿ.—ಅದೇನೂ ಹೇಳಲಿಕ್ಕೆ ಬರುವುದಿಲ್ಲ. ಅವರಿಗೆ 10ನೆಯ ಮೇ 1959ರ ವೇಳೆಗೆ ಈ ಕನ್ನಡ ಟೈಪ್‌ರೈಟರನ್ನು ಮಾನುಫಾಕ್ಚರು ಮಾಡಬೇಕು ಮತ್ತು ಇಲ್ಲಿಗೆ ಸಪ್ಲೈಮಾಡಬೇಕು ಎಂದು ಅವರ ಕೂಡ ಅಗ್ರಿಮೆಂಟು ಆಗಿದೆ.

ಶ್ರೀ ಡಿ. ಟಿ. ಸೀತಾರಾಮರಾವ್.—ಸರಕಾರ ಕನ್ನಡ ಟೈಪ್‌ರೈಟರುಗಳ ಕೀ ಬೋರ್ಡನ್ನು ಅಂಗೀಕಾರ ಮಾಡುವಾಗ ಮತ್ತು, ಅದನ್ನು ಸೆರೆಕ್ಟು ಮಾಡುವಾಗ ಇನ್ನೆಷ್ಟು ಜನ ಕೀ ಬೋರ್ಡುಗಳನ್ನು ತಯಾರಿಸಿ ಪರಿಶೀಲನೆಗಾಗಿ ತೆಗೆದುಕೊಂಡು ಬಂದಿದ್ದರು?

ಶ್ರೀ ಅಣ್ಣಾರಾವ್ ಗಣಮುಖಿ.—ರೆಮಿಂಗ್‌ಟನ್ ರ್ಯಾಂಡ್ ಆಫ್ ಇಂಡಿಯಾ ಲಿಮಿಟೆಡ್, ಕಲ್ಕತ್ತ ಇವರ ಕಡೆಯಿಂದಲೂ ಒಂದು ಕೀ ಬೋರ್ಡನ್ನು ಕೊಟ್ಟಿದ್ದರು.

ಶ್ರೀ ಯು. ಎಂ. ಮಾದಪ್ಪ.—ಕನ್ನಡ ಟೈಪ್‌ರೈಟರುಗಳನ್ನು ನಮಗೆ ಯಾವಾಗ ಕೊಡಿಸುತ್ತೀರಿ?

ಶ್ರೀ ಅಣ್ಣಾರಾವ್ ಗಣಮುಖಿ.—ಆರು ಟೈಪ್‌ರೈಟರುಗಳು ಬಂದನಂತರ ಅವು ಚೆನ್ನಾಗಿ ಕೆಲಸ ಮಾಡುವುದಾಗಿದ್ದರೆ ಅನಂತರ ಅದನ್ನು ಪರಿಶೀಲನ ಬೇಕಾಗಬಹುದು.

Sri U. M. MADAPPA.—Are the Government aware of the fact that there is inordinate delay in the execution of the key board because no key-board can be finalised? Will the Government see that it is speedily disposed of?

Sri ANNA RAO GANAMUKHI.—It is a suggestion for action.

Sri M. C. NARASIMHAN.—Are the Government aware that so far as other languages are concerned, that is, Hindi, Tamil, etc., there are different types of key-boards put on the market already by the respective Governments?

Sri ANNA RAO GANAMUKHI.—May be.

ಶ್ರೀ ಎ. ಆರ್. ಪಂಚಗವಿ.—ಶ್ರೀ ಅನಂತ ಸುಬ್ಬರಾಯರ ಟೈಪ್‌ರೈಟರಿನ ಬಗ್ಗೆ ಸರಿಯಾದ ರೀತಿಯಲ್ಲಿ